## ಕಡಿದಾಳು ಶಾಮಣ್ಣ
## ನಿರೂಪಣೆ: ಅಕ್ಷತಾ ಹುಂಚದಕಟ್ಟೆ

**ಕಲೆ:** ಮನೋಹರ್ ಆಚಾರ್ಯ

# ವಿದ್ವತ್ತು, ಸ್ನೇಹದ ಅನನ್ಯ ಸಂಗಮ

**ಸಂಶೋಧಕ ಪ್ರೊ. ಷ. ಶೆಟ್ಟರ್ ಅವರು 1935ರಲ್ಲಿ ಬಳ್ಳಾರಿ ಜಿಲ್ಲೆ ಹಡಗಲಿ ತಾಲ್ಲೂಕಿನ ಹಂಪಸಾಗರದಲ್ಲಿ ಜನಿಸಿದರು. ಮೈಸೂರು, ಧಾರವಾಡ, ಕೇಂಬ್ರಿಜ್‌ನಲ್ಲಿ ಉನ್ನತ ವ್ಯಾಸಂಗ ಮಾಡಿದ ಶೆಟ್ಟರ್ ಇತಿಹಾಸ, ಪ್ರಾಕ್ತನಶಾಸ್ತ್ರ, ಮಾನವಶಾಸ್ತ್ರ, ಕಲಾ ಇತಿಹಾಸ ಮತ್ತು ಹಳಗನ್ನಡ ಕಾವ್ಯ ಕುರಿತು ಸಂಶೋಧನಾ ಗ್ರಂಥಗಳನ್ನು ಪ್ರಕಟಿಸಿದ್ದಾರೆ. 'ಸಾವನ್ನರಸಿ', 'ಸಾವನ್ನು ಸ್ವಾಗತಿಸಿ', 'ಶಂಗಂ ತಮಿಳಗಂ ಮತ್ತು ಕನ್ನಡ ನಾಡು–ನುಡಿ', 'ಸೋಮನಾಥಪುರ', 'ಬಾದಾಮಿ ಚಾಲುಕ್ಯರ ಶಾಸನ ಸಾಹಿತ್ಯ', 'ಹಳಗನ್ನಡ– ಲಿಪಿ – ಲಿಪಿಕಾರ – ಲಿಪಿ ವ್ಯವಸಾಯ', 'ರೂವಾರಿ', 'ಪ್ರಾಕೃತ ಜಗದ್ವಲಯ' ಸೇರಿದಂತೆ ಹಲವಾರು ಮಹತ್ವದ ಕೃತಿಗಳನ್ನು ಬರೆದಿದ್ದಾರೆ. 10ಕ್ಕೂ ಹೆಚ್ಚು ಇಂಗ್ಲಿಷ್ ಕೃತಿಗಳನ್ನು ರಚಿಸಿದ್ದಾರೆ. ಕನ್ನಡಕ್ಕೆ ಶಾಸ್ತ್ರೀಯ ಸ್ಥಾನಮಾನ ದೊರಕುವಲ್ಲಿ ಶೆಟ್ಟರ್ ಸಂಶೋಧನೆಗಳ ಕೊಡುಗೆ ಅಪಾರ. ಇತ್ತೀಚೆಗೆ ನಿಧನರಾದ (28 ಫೆಬ್ರುವರಿ 2020) ಅವರ ವ್ಯಕ್ತಿತ್ವದ ಆಪ್ತಚಿತ್ರಣ ಇಲ್ಲಿದೆ.**

ನಮ್ಮಿಬ್ಬರ ನಡುವಿನ ಸ್ನೇಹ ಬಹಳ ವಿಚಿತ್ರವಾದದ್ದು. ಏಕೆಂದರೆ ಷ. ಶೆಟ್ಟರ್ ಅವರು ನನಗೆ ಮೊದಲ ಪರಿಚಯ ಆಗಿದ್ದು ನಾನು ಮೈಸೂರಿನಲ್ಲಿ ಬಿ.ಎ. ಪದವಿ ಓದುತ್ತಿರುವಾಗ. ಆಮೇಲೆ ಒಂದು ಕಠಿಣ ಸಂದರ್ಭದಲ್ಲಿ ನನ್ನ ನೆರವಿಗೂ ನಿಂತ ಅವರೊಡನೆ ಸ್ನೇಹವೂ ಬೆಳೆಯಿತು. ನಂತರದಲ್ಲಿ ನಾನು ಮೈಸೂರು ಬಿಟ್ಟು ಊರಕಡೆ ಬಂದು ರೈತನಾದೆ. ಅವರು ಇಂಗ್ಲೆಂಡಿಗೆ ಹೋದರು. ನಂತರ ಅವರು ಮತ್ತೆ ಸಿಕ್ಕಿದ್ದು ಮೂವತ್ತು ವರುಷಗಳ ತರುವಾಯವೇ. ಅದೂ ಕನ್ನಡ ನಾಡಿಗೆ ವಾಪಸ್ ಬಂದು ಕನ್ನಡದಲ್ಲಿ ಬರೆಯಲು ಪ್ರಾರಂಭಿಸಿದ ನಂತರವೇ. ಆಮೇಲೆ ಹಿಂದಿಗಿಂತ ಆಪ್ತವಾದ ಸ್ನೇಹ ನಮ್ಮಿಬ್ಬರಲ್ಲಷ್ಟೇ ಅಲ್ಲ, ನಮ್ಮೆರಡು ಕುಟುಂಬಗಳ ನಡುವೆಯೂ ಬೆಳೆಯಿತು.

ಷ. ಶೆಟ್ಟರ್ ಅವರು ನಾನು ಮೈಸೂರಿನ ಮಹಾರಾಜ ಕಾಲೇಜಿಗೆ ಬಿ.ಎ. ಓದಲು ಬಂದಾಗ ಅವರು ಅಲ್ಲೇ ಇದ್ದರು. ಆಗ ನಮ್ಮದು ದೊಡ್ಡ ಪಟಾಲಂ ಬಿಡಿ. ಪೂರ್ಣಚಂದ್ರ ತೇಜಸ್ವಿ,